ಕರ್ನಾಟಕ ಜೀವ ವಿಮೆ ಯೋಜನೆ

1199 (1434) ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಸಣ್ಣ ಉಳಿತಾಯ ಮತ್ತು ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕ ಜೀವ ವಿಮೆ ಯೋಜನೆಯಡಿ ನೌಕರದಾರರು ಪ್ರತಿ ತಿಂಗಳು ವಿಮಾಕಂತನ್ನು ಬರಿಸಿದ್ದರೂ ಸಹ ನೌಕರರಿಗೆ ಸರಿಯಾಗಿ ಬಾಂಡುಗಳು ತಲುಪುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

2) ಪ್ರತಿ ವರ್ಷ ಬಾಕಿ ಪತ್ರಿಕೆಗಳನ್ನು ಕಳಿಸಲಾಗುತ್ತಿದೆಯೆ?

3) ಮರಣೋತ್ತರ ಸಂಬಂಧಿಸಿದ ವಾರಸುದಾರರಿಗೆ ಜೀವ ವಿಮೆ ಹಣ ಬಟವಾಡೆ ಮಾಡಬೇಕಾದ ಪ್ರಕರಣಗಳು ಎಷ್ಟು?

4) ತ್ವರಿತವಾಗಿ ಬಟವಾಡೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ.?

ಶ್ರೀ ಬಾಬುರಾವ್ ಚಿಂಚನಸೂರ್ (ಸಣ್ಣ ಉಳಿತಾಯ ಮುಜರಾಯಿ ಹಾಗೂ ವಿಮೆ ರಾಜ್ಯ ಸಚಿವರು)

1) ಬಂದಿದೆ

2) ಇಲ್ಲ

3) 458

4) ಈ ಪ್ರಕರಣಗಳನ್ನು ವಿದ್ಯುತ್ ಮೇರೆಗೆ ಇತ್ಯರ್ಥಪಡಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಅಥಣಿ ತಾಲ್ಲೂಕಿನ ಮಹಾರಾಷ್ಟ್ರ ಗಡಿ ಭಾಗದ ಜನರಿಗೆ ಕುಡಿಯುವ ನೀರಿನ ಹಾಗೂ ನೀರಾವರಿ ಸೌಲಭ್ಯ ಕಟ್ಟಿಸುವುದು.

1200 (1436) ಶ್ರೀ ಶಹಜಹಾನ್ ಇ. ಡೊಂಗಾರಗಾಂವ್ (ಅಥಣಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಅಥವಾ ತಾಲ್ಲೂಕಿನ ಮಹಾರಾಷ್ಟ್ರದ ಗಡಿಭಾಗದ ಜನರು ಕುಡಿಯುವ ನೀರಿನ ಸೌಕರ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಈ ಭಾಗದಲ್ಲಿ ಗ್ರಾಂ ನದಿಯಲ್ಲಿ ನೀರಾವರಿ ಸೌಕರ್ಯ ಕಲ್ಪಿಸಲು ಚೆರ್‌ಡ್ಯಾಂ ನಾಲಾ ಬಂದರು ಹಾಗೂ ಕೆರೆಗಳ ನಿರ್ಮಾಣಕ್ಕಾಗಿ ಹೆಚ್ಚಿನ ಅವಶ್ಯಕತೆ ಹಾಗೂ ಬೇಡಿಕೆ ಇದ್ದು ಇದಕ್ಕೆ ಸಂಬಂಧಿಸಿದಂತೆ 2000-200 1ನೇ ಸಾಲಿನ ಕಾರ್ಯಕ್ರಮಗಳ ಪಟ್ಟಿಯನ್ನು ಯೋಜನೆಗಳಿಗೆ ಮಂಜೂರಾತಿ ಕೊಟ್ಟಿದ್ದರೂ 1:3 ಅಣುಷ್ಠಾನ ನಿಗಧಿಪಡಿಸಿಲ್ಲ ಹಾಗೂ ಬಿಡುಗಡೆ ಮಾಡದಿರಲು ಕಾರಣಗಳೇನು?

ಆ) ಈ ವರ್ಷ ಆಯವ್ಯಯದಲ್ಲಿ ಅವಶ್ಯಕ ಕಾರ್ಯಕ್ರಮಗಳಿಗೆ ಎಷ್ಟು ಅನುದಾನ ನಿಗದಿಪಡಿಸಲಾಗಿದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬಂದಿದೆ. ಪ್ರಸ್ತುತ ಸಾಲಿನಲ್ಲಿ ಆಗ್ರಾ ನಾಲೆಗೆ ಎರೂರ್ - ಸಂಬರಗಿ ಅಲ್ಲದೆ ನಾಸ ಬಂಧಾರ ನಿರ್ಮಿಸಲು ಶೇ. 70 ರಷ್ಟು ಅನುದಾನ ಲಭ್ಯವಿದ್ದು, ಟೆಂಡರ್ ಆಹ್ವಾನಿಸಿದೆ. ಚಿಲ್ಲದೆ ಗ್ರಾಮ ನದಿಯಗುಂಟು ಒಟ್ಟು 14 ಕಾಮಗಾರಿಗಳಿಗೆ ಕೇವಲ ಸಾಂಕೇತಿ ಕ ಅನುದಾನವಿದ್ದುದರಿಂದ ಮಂಜೂರಾತಿ ನೀಡಲು ಸಾಧ್ಯವಾಗುವುದಿಲ್ಲ.

ಆ) ಒಟ್ಟು 21. 19 ಲಕ್ಷ ರೂ. ಗಳ ಅನುದಾನ ಒದಗಿಸಲಾಗಿದೆ.

ಅಥಣಿ ತಾಲ್ಲೂಕಿನಲ್ಲಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಪೂರೈಕೆ

1201 (1437) ಶ್ರೀ ಡೊಂಗರವಾಂವ ಶಹಜಹಾನ್ (ಅಥಣಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಥಣಿ ತಾಲ್ಲೂಕಿನಲ್ಲಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಲು ರೈತರಿಂದ ಅಂದಾಜು ವೆಚ್ಚದ ಹಣವನ್ನು ತುಂಬಿ ಕೊಂಡು ಅವರಿಗೆ ವಿದ್ಯುತ್ ಪೂರೈಕೆ ಮಾಡದೇ ಸ್ಥಗಿತಕೊಂಡಿರುವ ಪ್ರಕರಣ ಗಳೆಷ್ಟು?

ಆ) ಹಾಗೂ ಇವುಗಳಿಗೆ ವಿದ್ಯುತ್ ಪೂರೈಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ವೀರಕುಮಾರ ಅ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಅಥಣಿ ತಾಲ್ಲೂಕಿನಲ್ಲಿ 'ಸ್ವಯಂ ಆರ್ಥಿಕ ನೆರವಿನ ಯೋಜನೆಗೆ' ಯಡಿಯಲ್ಲಿ ಒಟ್ಟು 9 ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಒದಗಿಸಬೇಕಾಗಿರುತ್ತದೆ.

ಆ) 'ಸ್ವಯಂ ಆರ್ಥಿಕ ನೆರವಿನ ಯೋಜನೆ' ಯಡಿ ಬಾಕಿ ಉಳಿದಿರುವ ಈ 9 ನೀರಾವರಿ ಪಂಪುಸೆಟ್ಟುಗಳಿಗೆ ಮಾರ್ಚ್ - 2001 ರ ಅಂತ್ಯದೊಳಗೆ ವಿದ್ಯುತ್ ಸಂಪರ್ಕ ಒದಗಿಸಲು ಅಗತ್ಯ ವಿರುವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಬೆಂಗಳೂರ ಬಸ್ ನಿಲ್ದಾಣದ ಸಮೀಪ ಪಾದಚಾರಿಗಳ ಸುರಂಗ ಮಾರ್ಗ ಕಾಮಗಾರಿ

1202 (1219) ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಬಸ್ ನಿಲ್ದಾನದ ಪ್ರದೇಶದಲ್ಲೆ ಪಾದಚಾರಿಗಲು ಮೇಲು ಸೇತುವೆ ಹಾಗೂ ಪಾದಚಾರಿಗಳ ಸುರಂಗಮಾರ್ಗ (ಸಂಗಂ ಟಾಕೀಸ್ ಎದುರು) ಕಾಮಗಾರಿಯನ್ನು ಯಾವಾಗ ಆರಂಭಿಸಲಾಯಿತು ಈ ಕಾಮಗಾರಿಯು ಅಂದಾಜು ವೆಚ್ಚ ಎಷ್ಟು?

ಆ) ಈ ಕಾಮಗಾರಿಯನ್ನು ಯಾವ ಏಜೆನ್ಸಿಯ ಮೂಲಕ ಕೈಗೊಳ್ಳಲಾಗುತ್ತಿದೆ. ಮತ್ತು ಕರಾರಿನ ಪ್ರಕಾರ ಈ ಕಾಮಗಾರಿಯನು ಯಾವ ದಿನಾಂಕದೊಳಗೆ ಮುಗಿಸಬೇಕಾಗಿತ್ತು. ನಿಗಧಿತ ಅವಧಿಯಲ್ಲೆ ಕಾಮಗಾರಿಯನ್ನು ಮುಗಿಸದಿರಲು ಕಾರಣಗಳೇನು?